**JUNE 08, 2024**

# ALL INDIA RADIO - DHARWAD

# PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಯಶಸ್ವಿನಿ ಯೋಜನೆ,** ಪರಿಷ್ಕರಣೆ; 2 ಸಾವಿರಕ್ಕೂ ಹೆಚ್ಚಿನ ಅನಾರೋಗ್ಯಗಳಿಗೆ, 5 ಲಕ್ಷ ರೂಪಾಯಿ ವರೆಗೆ, ಉಚಿತ ಚಿಕಿತ್ಸೆ.
- **10ನೇ ಅಂತಾರಾಷ್ಟ್ರೀಯ** ಯೋಗ ದಿನಾಚರಣೆ; ಪೂರ್ವಭಾವಿಯಾಗಿ, 'ಯೋಗೋತ್ಸವ' ಕಾರ್ಯಕ್ರಮ – ದಿನೇಶ್ ಗುಂಡೂರಾವ್.
- **ರಾಜ್ಯದ ಕೃಷಿ ಪದ್ಧತಿಯಲ್ಲಿ,** ಗುಣಾತ್ಮಕ ಬದಲಾವಣೆಗೆ, ಇಸ್ರೇಲ್ ಕೃಷಿ ತಜ್ಞರ ನೆರವು – ಎನ್.ಚಲುವರಾಯಸ್ವಾಮಿ.
- **ಔಷಧೀಯ ಸಸ್ಯಗಳ ಸಂರಕ್ಷಣೆ;** ಇಂದು ಮತ್ತು ನಾಳೆ, ಹುಬ್ಬಳ್ಳಿಯಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರ – ಕಪ್ಪತಗುಡ್ಡದ ಶಿವಕುಮಾರ ಸ್ವಾಮೀಜಿ.

<><><>

**ಈಗ ವಾರ್ತೆಗಳ ವಿವರ**

<><><>

**ಸಂಸತ್ತಿನಲ್ಲಿ ರಾಷ್ಟ್ರೀಯ** ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್.ಡಿ.ಎ.) ನಾಯಕರಾಗಿ, ನರೇಂದ್ರ ಮೋದಿ ಅವರನ್ನು, ಎನ್.ಡಿ.ಎ. ಸಂಸದರು, ಶುಕ್ರವಾರ ಅವಿರೋಧವಾಗಿ ಆಯ್ಕೆ ಮಾಡಿದರು. ದೇಶ, ವಿದೇಶದ ಗಣ್ಯರ ಸಮ್ಮುಖದಲ್ಲಿ, ಮೋದಿ ಅವರು, ಮೂರನೇ ಬಾರಿಗೆ ಪ್ರಧಾನಿಯಾಗಿ, ನಾಳೆ ಭಾನುವಾರ ರಾತ್ರಿ 7.15ಕ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಗೋಪ್ಯತೆಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

<><><>

**ರಾಜ್ಯ ಸರ್ಕಾರ, ಯಶಸ್ವಿನಿ ಯೋಜನೆ ಅಡಿ,** 5 ಲಕ್ಷ ರೂಪಾಯಿ ವರೆಗೆ, ಒಟ್ಟು 2 ಸಾವಿರದ ನೂರಾ 28 ಅನಾರೋಗ್ಯಕ್ಕೆ ಚಿಕಿತ್ಸೆಗಳು, ಉಚಿತವಾಗಿ ಲಭಿಸುವಂತೆ ಯೋಜಿಸಿದೆ. ಆ ಪೈಕಿ 206 ಚಿಕಿತ್ಸೆಗಳ ದರವನ್ನು ಪರಿ ್ಕರಿಸಲಾಗಿದೆ. ಯಶಸ್ವಿನಿ ಯೋಜನೆಯಡಿ, ಒಟ್ಟು 637 ನೆಟ್‌ವರ್ಕ್ ಆಸ್ಪತ್ರೆಗಳು ನೊಂದಾಯಿಸಿಕೊಂಡಿದ್ದು, 602 ಖಾಸಗಿ ಆಸ್ಪತ್ರೆಗಳೂ, ಸೇರಿವೆ. ಯಶಸ್ವಿನಿ ಯೋಜನೆ ಅಡಿ, ಚಿಕಿತ್ಸೆಗೆ ಸರ್ಕಾರ ನಿಗದಿ ಪಡಿಸಿದ ದರ, ಕಡಿಮೆಯಿದ್ದ ಹಿನ್ನೆಲೆ, ಖಾಸಗಿ ಆಸ್ಪತ್ರೆಗಳು, ಈ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ಹಿಂದೇಟು ಹಾಕುತ್ತಿದ್ದವು. ಹೀಗಾಗಿ, ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ, ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರಕುವುದು ಕ ್ಟವಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ, ರಾಜ್ಯ ಸರ್ಕಾರ, ಯೋಜನೆಯ ಚಿಕಿತ್ಸಾ

ದರವನ್ನು ಶೇಕಡ 300ರ ವರೆಗೆ ಹೆಚ್ಚಿಸಿ, ಆದೇಶಿಸಿದೆ ಎಂದು, ವಾರ್ತಾ ಇಲಾಖೆ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ತಿಳಿಸಿದೆ.

<><><>

**10ನೇ ಅಂತಾರಾಷ್ಟ್ರೀಯ** ಯೋಗ ದಿನಾಚರಣೆ ಪೂರ್ವಭಾವಿಯಾಗಿ, 'ಯೋಗೋತ್ಸವ' ಎಂಬ ವಿನೂತನ ಕಾರ್ಯಕ್ರಮಕ್ಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ್ ಗುಂಡೂರಾವ್ ಸೋಮವಾರ ಸಂಜೆ, ಬೆಂಗಳೂರಿನಲ್ಲಿ ಚಾಲನೆ ನೀಡಲಿದ್ದಾರೆ. ಆಯು ್ ಇಲಾಖೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆ ಸೇರಿದಂತೆ, ಹಲವು ಸಂಘ–ಸಂಸ್ಥೆಗಳ ಸಹಕಾರದಲ್ಲಿ, ನಾಡಿದ್ದು ಸೋಮವಾರದಿಂದ, ಇದೇ 20ನೇ ತಾರೀಖಿನ ವರೆಗೆ, ಹತ್ತು ದಿನಗಳ ಕಾಲ, ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದೆ. 4 ಲಕ್ಷ ಜನ ರಾಜ್ಯಾದ್ಯಂತ ಯೋಗ ಪ್ರದರ್ಶನದ ಮೂಲಕ ಯೋಗೋತ್ಸವವನ್ನು ಆಚರಿಸಲಿದ್ದಾರೆ. ಆರೋಗ್ಯಕರ ಜೀವನ ಶೈಲಿಯ ಕುರಿತು ಮಾಹಿತಿ ಹಾಗೂ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.

<><><>

**ಬೆಂಗಳೂರಿನ ವಿಕಾಸಸೌಧದಲ್ಲಿ** ಇಸ್ರೇಲ್ ದೇಶದ ಪ್ರತಿನಿಧಿಗಳೊಂದಿಗೆ, ಕೃಷಿಯಲ್ಲಿ ಹೊಸ ಸಂಭಾವ್ಯ ಸುಧಾರಣೆಗಳ ಬಗ್ಗೆ, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಅವರು, ಸಮಾಲೋಚಿಸಿದರು. ಹವಾಮಾನ ಬದಲಾವಣೆ, ನೀರಿನ ಮಿತ ಬಳಕೆ, ವೈಜ್ಞಾನಿಕ ಕೃಷಿ ಮತ್ತಿತರ ವಿ ʼಯಗಳ ಕುರಿತು ಚರ್ಚೆ ನಡೆಯಿತು; ರಾಜ್ಯದ ಕೃಷಿ ಪದ್ಧತಿಯಲ್ಲಿ ಪರಿಣಾಮಕಾರಿ ಹಾಗೂ ಗುಣಾತ್ಮಕ ಬದಲಾವಣೆಗೆ ಸಲಹೆ, ಸಹಕಾರ ನೀಡುವಂತೆ ಕೋರಲಾಯಿತು ಎಂದು ಸಚಿವರು, ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ನೀರಿನ ಸಂಸ್ಕರಣೆ, ಮರು ಬಳಕೆ, ರೈತರಿಗೆ ತರಬೇತಿ ಕಾರ್ಯಕ್ರಮಗಳು, ತಂತ್ರಜ್ಞಾನದ ವರ್ಗಾವಣೆ ಬಗ್ಗೆ ಕೂಡ, ಚರ್ಚಿಸಲಾಯಿತು ಎಂದು, ಸಚಿವ ಎನ್.ಚಲುವರಾಯಸ್ವಾಮಿ, ತಿಳಿಸಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿಯ ಡಾಕ್ಟರ್ ಕಾರಂತ್ ಭಾರದ್ವಾಜ್**, ವಿನೂತನ 'ಫ್ರುಟ್ ಟ್ರೀಟ್' ಸ್ಟಾರ್ಟ್ ಅಪ್ ಕಂಪೆನಿ ಸ್ಥಾಪಿಸಿ, ವ್ಯಾಕ್ಯುಮ್ ಡ್ರೇನ್ ಮತ್ತು ಫ್ರೈ ಟೆಕ್ನಾಲಜಿ ಬಳಸಿ, ಹಣ್ಣು ಮತ್ತು ತರಕಾರಿಗಳ ಮೌಲ್ಯವರ್ಧನೆ ಮಾಡಿ, ದೇಶಾದ್ಯಂತ ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳನ್ನು ತಲುಪಿಸುತ್ತಿದ್ದಾರೆ. ಈ ಪ್ರಯತ್ನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದಕ್ಷಿಣಕನ್ನಡ ಜಿಲ್ಲೆ ಪುತ್ತೂರಿನ, ರಾಷ್ಟ್ರೀಯ ಗೇರು ಸಂಶೋಧನಾ ನಿರ್ದೇಶನಾಲಯದ, ಪ್ರಧಾನ ವಿಜ್ಞಾನಿ, ಡಾಕ್ಟರ್ ಮೋಹನ್ ತಲಕಾಲುಕೊಪ್ಪ.

<><><>

**ಡಾಕ್ಟರ್ ಮೋಹನ್ ತಲಕಾಲುಕೊಪ್ಪ ಧ್ವನಿ 40 ಸೆಕೆಂದುಗಳು**

<><><>

**ಹಾಸನ, ಮಂಡ್ಯ, ರಾಮನಗರ,** ದಕ್ಷಿಣಕನ್ನಡ, ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳ ತೆಂಗು ಬೆಳೆಗಾರರು, ಇದೇ 14 ಶುಕ್ರವಾರದ ಒಳಗೆ, ಉಂಡೆ ಕೊಬ್ಬರಿಯನ್ನು ಬೆಂಬಲ ಬೆಲೆ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡುವಂತೆ, ರಾಜ್ಯ ಕೃಷಿ ಮಾರಾಟ ಮಂಡಳಿ ಕೋರಿದೆ. ತುಮಕೂರು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ, ಬೆಂಬಲ ಬೆಲೆ ಯೋಜನೆ ಅಡಿ, ಕೊಬ್ಬರಿ ಖರೀದಿ ಕೇಂದ್ರಗಳು, ಈ ತಿಂಗಳ 14ರ ವರೆಗೆ ಮಾತ್ರ ಕಾರ್ಯನಿರ್ವಹಿಸಲಿವೆ ಎಂದು, ವ್ಯವಸ್ಥಾಪಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ವಿವಿಧ ಔಷಧೀಯ ಸಸ್ಯಗಳ ಸಂರಕ್ಷಣೆ,** ಕೃಷಿ ಆರೋಗ್ಯ ರಕ್ಷಣೆಯ ಕುರಿತು, ಇಂದು ಮತ್ತು ನಾಳೆ, ಹುಬ್ಬಳ್ಳಿಯ ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯದ, ಬಯೋಟೆಕ್ ಸಭಾ ಭವನದಲ್ಲಿ, ರಾಜ್ಯ ಮಟ್ಟದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು, ಗದಗ್ ಕಪ್ಪತಗುಡ್ಡದ ಶ್ರೀ ನಂದಿವೇರಿ ಸಂಸ್ಥಾನ ಮಠದ ಶಿವಕುಮಾರ ಸ್ವಾಮೀಜಿ ತಿಳಿಸಿದ್ದಾರೆ. 'ಔಷಧೀಯ ಸಸ್ಯಗಳ ಬೆಳೆಗಾರರು ಮತ್ತು ಖರೀದಿದಾರರು ಎದುರಿಸುತ್ತಿರುವ ಸವಾಲುಗಳು' ಎಂಬ ವಿಷಯದ ಕುರಿತು ಚರ್ಚೆ ನಡೆಯಲಿದೆ ಎಂದರು.

<><><>

**ವಿಶ್ವ ಪರಿಸರ ದಿನಾಚರಣೆ ಅಂಗವಾಗಿ,** ಹುಬ್ಬಳ್ಳಿಯ ವಸುಂಧರಾ ಫೌಂಡೇಶನ್, ಗ್ರೀನ್ ಕರ್ನಾಟಕ ಅಸೋಸಿಯೇಶನ್ ಹಾಗೂ ವಿ ಕೇರ್ ಫೌಂಡೇಷನ್ ಸಹಯೋಗದಲ್ಲಿ, ನಾಳೆ ಭಾನುವಾರ, ಬೆಳಗ್ಗೆ 6 ಗಂಟೆಗೆ, ಹುಬ್ಬಳ್ಳಿಯ ತೋಳನಕೆರೆ ಸಮೀಪ, ರನ್ ಫಾರ್ ನೇಚರ್ 2.0 ಕಾರ್ಯಕ್ರಮ ಆಯೋಜಿಸಿದೆ.

ಪರಿಸರ ಸಂರಕ್ಷಣೆ ಕುರಿತು ಜನ ಜಾಗ್ರತಿ ಮೂಡಿಸಲು, 5 ಕಿಲೋ ಮೀಟರ್ ಉದ್ದದ ರನ್ ಫಾರ್ ನೇಚರ್ ಕಾರ್ಯಕ್ರಮದಲ್ಲಿ, ನೂರಾರು ಜನ ಭಾಗಿಯಾಗಲಿದ್ದಾರೆ ಎಂದು, ಮೇಘರಾಜ ಕವಾಡ ತಿಳಿಸಿದ್ದಾರೆ.

<><><>

**ಧಾರವಾಡದ ಕಾರ್ಮಿಕ ಕ್ರೀಡಾಪಟು, ಮಲ್ಲಪ್ಪ ಪೂಜೇರ,** ಅಮೇರಿಕೆಯ ಬಾಸ್ಟನ್‌ನಲ್ಲಿ ನಡೆಯಲಿರುವ, ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಲು, ಅರ್ಹತೆ ಗಳಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಕ್ರೀಡಾಕೂಟಗಳಲ್ಲಿ, ಕರ್ನಾಟಕವನ್ನು ಪ್ರತಿನಿಧಿಸಿ, ಹಲವು ಪದಕಗಳನ್ನು ಗೆದ್ದಿರುವ ಮಲ್ಲಪ್ಪ ಪೂಜೇರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಮಲ್ಲಪ್ಪ ಪೂಜೇರ ಧ್ವನಿ 45 ಸೆಕೆಂದುಗಳು**

<><><>

**ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಆಯೋಜಿಸಿದ,** ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ, ಶುಕ್ರವಾರ ಮುಕ್ತಾಯಗೊಂಡ, ರಾಜ್ಯ ಅಥ್ಲೆಟಿಕ್ಸ್ ಕೂಟದಲ್ಲಿ, ಮಿಂಚಿನ ಓಟ ಪ್ರದರ್ಶಿಸಿದ, ತುಮಕೂರಿನ ಮೊಹಮ್ಮದ ಸಾದತ್ ಹಾಗೂ ಬೆಳಗಾವಿಯ ದಾನೇಶ್ವರಿ ಎ.ಟಿ. ಕ್ರಮವಾಗಿ, ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ, ಮಿಂಚಿನ ಓಟ ಪ್ರದರ್ಶಿಸಿ, ಚಾಂಪಿಯನ್‌ಗಳಾದರು. ಯೂಥ್, ಬಾಲಕ ಹಾಗೂ ಬಾಲಕಿಯರ ವಿಭಾಗದ 100 ಮೀಟರ್ಸ್ ಓಟದ ಚಿನ್ನದ ಪದಕ, ಸವಿನ್ ತಿಂಗಳಾಯ ಮತ್ತು ಸ್ತುತಿ ಶೆಟ್ಟಿ ಗಳಿಸಿದರು.

<><><>

**ಭಾರತ ಬ್ರಿಜ್ ಫೆಡರೇಶನ್ ಮತ್ತು** ಕರ್ನಾಟಕ ಬ್ರಿಜ್ ಸಂಸ್ಥೆಯ ಆಶ್ರಯದಲ್ಲಿ, ಕರಾವಳಿ ಬ್ರಿಜ್ ಸಂಸ್ಥೆ, ಮಂಗಳೂರಿನಲ್ಲಿ ಆಯೋಜಿಸಿದ, ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಶಿಪ್‌ನ, ಡಾಕ್ಟರ್ ಕೆ.ಕೆ.ಭಟ್ನಾಗರ್ ಸ್ಮಾರಕ, ಮಿಶ್ರ ಪೇರ್‌ನ ಫೈನಲ್ಸ್‌ಗೆ, ಮುಂಬೈ ದಂಪತಿ ಸಂದೀಪ್ ಹಾಗೂ ಮರಿಯಾನಿ ಕರ್ಮಾಕರ್ ಅರ್ಹತೆ ಗಳಿಸಿದ್ದಾರೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ವೃತ್ತಿ ರಂಗಭೂಮಿ ಹಿರಿಯ ಕಲಾವಿದೆ,** ಹುಬ್ಬಳ್ಳಿಯ ಪುಷ್ಪಮಾಲಾ ಅಣ್ಣಿಗೇರಿ ಅವರಿಗೆ, ವೀರಣ್ಣ ರಾಜೂರ ದತ್ತಿ 'ರಾಜಮಾರ್ಗ ಪ್ರಶಸ್ತಿ' ನೀಡಿ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ ಗೌರವಿಸಿದೆ.

<><><>

**ಧಾರವಾಡ ಜಿಲ್ಲೆಯ** ತುಪ್ಪರಿ ಹಳ್ಳ ಮತ್ತು ಬೆಣ್ಣಿ ಹಳ್ಳದ ಪ್ರವಾಹದ ಬಗ್ಗೆ, ನಿರಂತರ ನಿಗಾ ವಹಿಸುವಂತೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ತಾಲೂಕು ಆಡಳಿತಗಳಿಗೆ ಸೂಚಿಸಿದ್ದಾರೆ.

<><><>

**ಉಡುಪಿ, ಮಲ್ಪೆಯ** ಸೀ ವಾಕ್ ಸಮೀಪ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯ ನಡೆಯಿತು.

<><><>

**'ಸಿಗಂದೂರು ಲಾಂಚ್',** ಗರಿ ್ಠ 17 ದಿನ ಮಾತ್ರ ಕಾರ್ಯ ನಿರ್ವಹಿಸಲಿದೆ ಎಂದು, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ತಿಳಿಸಿದೆ.

<><><>

**ಯಾದಗಿರಿ ಜಿಲ್ಲೆಯಲ್ಲಿ,** ಒಟ್ಟು 59 ಬಾಲ್ಯ ವಿವಾಹಗಳನ್ನು ತಡೆಯಲಾಗಿದ್ದು, ಪೊಲೀಸ್ ಠಾಣೆಯಲ್ಲಿ 8 ಪ್ರಕರಣಗಳು ದಾಖಲಾಗಿವೆ ಎಂದು, ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

<><><>

**ವಿಜಯಪುರ ಜಿಲ್ಲೆಯಾದ್ಯಂತ,** 10 ತಾಯಂದಿರ ಮರಣಗಳು ಸಂಭವಿಸಿವೆ ಎಂದು, ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

<><><>

**ಬಾಲಿವುಡ್ ಸಿನೆಮಾ,** 'ಹಮಾರೆ ಬಾರಾ' ಚಿತ್ರ ಪ್ರದರ್ಶನವನ್ನು ನಿಷೇಧಿಸಿ, ಸರ್ಕಾರ ಆದೇಶಿಸಿದೆ. ಕೋಮು ಸೌಹಾರ್ದತೆಗೆ ಧಕ್ಕೆ ಸಾಧ್ಯತೆ ಹಿನ್ನೆಲೆ, ಈ ಕ್ರಮ ಕೈಗೊಳ್ಳಲಾಗಿದೆ ಎಂದು, ಆದೇಶದಲ್ಲಿ ತಿಳಿಸಿದೆ.

<><><>

**ಉಪ ಲೋಕಾಯುಕ್ತ,** ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು, ಇದೇ 14ರಿಂದ 16ರ ವರೆಗೆ, ಗದಗ ಜಿಲ್ಲೆ ಪ್ರವಾಸ ಕೈಗೊಳ್ಳಲಿದ್ದಾರೆ.

<><><>

**ಪ್ರಧಾನಮಂತ್ರಿ ಕಿಸಾನ್ ಯೋಜನೆಯಡಿ,** ಮುಂಬರುವ ಆರ್ಥಿಕ ನೆರವು ಪಡೆಯಲು, ರೈತರಿಗೆ ಇ-ಕೆ.ವೈ.ಸಿ. ಕಡ್ಡಾಯ ಎಂದು, ಹಾವೇರಿ ಜಿಲ್ಲೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ತಿಳಿಸಿದ್ದಾರೆ.

<><><>

## ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಯಶಸ್ವಿನಿ ಯೋಜನೆ,** ಪರಿಷ್ಕರಣೆ; 2 ಸಾವಿರಕ್ಕೂ ಹೆಚ್ಚಿನ ಅನಾರೋಗ್ಯಗಳಿಗೆ, 5 ಲಕ್ಷ ರೂಪಾಯಿ ವರೆಗೆ, ಉಚಿತ ಚಿಕಿತ್ಸೆ.
- **10ನೇ ಅಂತಾರಾಷ್ಟ್ರೀಯ** ಯೋಗ ದಿನಾಚರಣೆ; ಪೂರ್ವಭಾವಿಯಾಗಿ, 'ಯೋಗೋತ್ಸವ' ಕಾರ್ಯಕ್ರಮ – ದಿನೇಶ್ ಗುಂಡೂರಾವ್.
- **ರಾಜ್ಯದ ಕೃಷಿ ಪದ್ಧತಿಯಲ್ಲಿ,** ಗುಣಾತ್ಮಕ ಬದಲಾವಣೆಗೆ, ಇಸ್ರೇಲ್ ಕೃಷಿ ತಜ್ಞರ ನೆರವು – ಎನ್.ಚಲುವರಾಯಸ್ವಾಮಿ.
- **ಔಷಧೀಯ ಸಸ್ಯಗಳ ಸಂರಕ್ಷಣೆ;** ಇಂದು ಮತ್ತು ನಾಳೆ, ಹುಬ್ಬಳ್ಳಿಯಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರ – ಕಪ್ಪತಗುಡ್ಡದ ಶಿವಕುಮಾರ ಸ್ವಾಮೀಜಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ